ಸೂರ್ಯೋದಯದಲ್ಲೂ ಕಾಣುವುದು ಒಂದೇ ಸೂರ್ಯನಾದರೂ ಅವನು ಪ್ರಕಟವಾಗುವ ರೀತಿಯಲ್ಲಿ ವ್ಯತ್ಯಾಸವಿತ್ತು. ಕಾರವಾರದಲ್ಲಿ ಪರ್ವತ ಶ್ರೇಣಿಗಳ ತೊಟ್ಟಿಲಿನಲ್ಲಿ ಕೂಸೊಂದು ನಿಧಾನ ಎದ್ದು ಬರುವಂತೆ ಕಾಣುತ್ತಾನೆ. ಮನೆ ಅಂಗಳದಿಂದಲೇ ನೋಡಿದರೆ ತೆಂಗಿನ ಮಡಲಿನ ಅಲುಗಾಟದಲ್ಲಿ, ಬಾಳೆ ತಿಳ್ಳಿನ ಭೇದಗಳಲ್ಲಿ, ನುಗ್ಗಿ ಎಲೆಗಳ ಕಂಪನದಲ್ಲಿ ಇಷ್ಟಿಷ್ಟೇ ಕಣ್ತೆರೆಯುತ್ತಾನೆ. ಆದರೆ ಈ ಬಟಾ ಬಯಲಲ್ಲಿ ಸೂರ್ಯ ಬೆತ್ತಲೆ ಹುಟ್ಟಿದಂತೆ ಕಾಣುತ್ತಾನೆ. ತನ್ನ ಈ ಹೋಲಿಕೆಯನ್ನು ಸುಮಿಗೆ ಹೇಳಲು ತಿರುಗಿದರೆ ಆಕೆ ಕಣ್ಮುಚ್ಚಿ ನಿದ್ದೆಹೋಗಿದ್ದಳು. ಹೊಂಬಣ್ಣದ ಸೂರ್ಯನ ಎಳೆಯ ಕಿರಣಗಳಿಗೆ ಅವಳ ಮುಖವು ಬೆಳಗುತ್ತಿತ್ತು, ಅಂಗಳದಲ್ಲಿ ಆಯಿ ಹಬ್ಬಿಸುತ್ತಿದ್ದ ಹೀರೆಬಳ್ಳಿಗೆ ಅರಳಿದ ಹಳದಿ ಹೂಗಳ ಹಾಗೆ!

ಸೂರ್ಯೋದಯವನ್ನು ವೀಕ್ಷಿಸುತ್ತಾ ಬಂದವನಿಗೆ ಹಿಂದೆ ಸ್ಕಾರ್ಪಿಯೋ ವಾಹನ ತಮ್ಮನ್ನು ಫಾಲೋ ಮಾಡ್ತಿದೆ ಎಂಬುದು ಗಮನಕ್ಕೆ ಬಂತು. ಕಪ್ಪು ಗ್ಲಾಸುಗಳ ಆ ವಾಹನವು ಅವನಲ್ಲಿ ಯಾವುದೋ ಅಪಾಯದ ಮುನ್ಸೂಚನೆಯನ್ನು ಟ್ರಿಗರ್ ಮಾಡಿತ್ತು. ನಿದ್ರಾವಸ್ಥೆಯಲ್ಲಿರುವ ಶೈಲತ್ತೆಯನ್ನು ಎಬ್ಬಿಸಿ ಅದನ್ನು ಅವಳ ಗಮನಕ್ಕೆ ತರುವುದೇ ಬೇಡವೇ ಎಂದು ಅವನ ಮನಸ್ಸು ಹೊಯ್ದಾಡಿತು. ಇವರ ಕಾರಿನ ವೇಗದಲ್ಲೇ ಚಲಿಸುತ್ತಿದ್ದರಿಂದ ಹಿಂಬಾಲಿಸುತ್ತಿದ್ದ ವಾಹನವು ಒಂದು ನಿರ್ದಿಷ್ಟ ಅಂತರವನ್ನು ಕಾದುಕೊಂಡಿತ್ತು. ಕಣ್ಣುಟ್ಟುವವರೆಗೂ ಚಾಚಿಕೊಂಡಿದ್ದ ವಿಸ್ತಾರ ಬಯಲಿನಲ್ಲಿ ಜನರೇ ಕಾಣುತ್ತಿರಲಿಲ್ಲ. ಬೇಗನೇ ಯಾವುದಾದರೂ ಊರು ತಲುಪಿದರೆ ಅಲ್ಲಿ ಚಹ ಕುಡಿಯಲು ನಿಲ್ಲಿಸು ಎನ್ನಬೇಕು.

ಯಾರೋ ಆಗಿದ್ದರೆ ಕಾರು ಮುಂದೆ ಹೋಗುತ್ತದೆ. ತಮ್ಮನ್ನು ಫಾಲೋ ಮಾಡುವವರೇ ಆಗಿದ್ದರೆ ಅವರೂ ನಿಲ್ಲುತ್ತಾರೆ. ಲಿಂಗಣ್ಣ ಅದೆಷ್ಟೇ ಬದಲಾದಂತೆ ಕಂಡರೂ, ವಿರುಪಾಕ್ಷಿಯ ಅಂತು ಇನ್ನೂ ತಿಳಿದಿಲ್ಲ. ಸಂಭಾವ್ಯ ಆಪತ್ತುಗಳನ್ನು ಊಹಿಸಿದ ಪ್ರೀತಂನ ಬುದ್ಧಿ ಸೆಳಕ ಮೀನಿನಂತೆ ಚುರುಕಾಗಿತ್ತು. ಅವನ ದೃಷ್ಟಿ ಈಗ ಸ್ಕಾರ್ಪಿಯೋ ಮೇಲೇ ಇತ್ತು. ರಸ್ತೆ ಪಕ್ಕದಲ್ಲಿ ಕೆಲವು ಮನೆಗಳು ಗೋಚರಿಸಿದವು. ಯಾವುದೋ ಊರು ಹತ್ತಿರವಾಗಲಿದೆ ಅನಿಸಿತು.

ಡ್ರೈವರ್ ರಸ್ತೆ ಪಕ್ಕದ ಹೋಟೆಲ್ಲಿನೆದುರು ನಿಲ್ಲಿಸಿದ. ಹಿಂದೆ ಬರುತ್ತಿದ್ದ ವಾಹನ ವೇಗವನ್ನು ನಿಧಾನಗೊಳಿಸಿದ್ದು ಗಮನಿಸಿ ಪ್ರೀತಂ ಇನ್ನಷ್ಟು ಅಲರ್ಟ್ ಆದ. ಆದರೆ ಅದು ನಿಲ್ಲದೇ ಮುಂದೆ ಹೋಯಿತು. ಸ್ವಲ್ಪ ನಿರಾಳತೆಯಿಂದ 'ಏಳಿ, ಚಹ ಕುಡಿಯೋಣ' ಎಂದು ಸುಮಿಯನ್ನೂ ಶೈಲತ್ತೆಯನ್ನೂ ಎಬ್ಬಿಸಿದ. ಅದೊಂದು ಸಾಧಾರಣ ಹೋಟೆಲ್. ಸುಮಿ ಶೈಲತ್ತೆ ಬರೀ ಚಹ ಅಷ್ಟೆ ಕುಡಿದರು. ಪ್ರೀತಂ 'ದೋಸೆ ಕೊಡಿ' ಅಂದ. ಆದರೆ ಅಲ್ಲಿ ಮಂಡಕ್ಕಿ ಮಾತ್ರ ರೆಡಿಯಾಗಿತ್ತು. ತರಿಸಿ ತಿಂದ. ಯಾರೋ ತಮ್ಮನ್ನು ಫಾಲೋ ಮಾಡುತ್ತಿರುವ ಬಗ್ಗೆ ಶೈಲತ್ತೆಗೆ ಹೇಳಿದ. ಅದರ ನಂಬರ್ ಹಿಂಗಿಂಗೆ ಅಂದ. ಶೈಲತ್ತೆಗೆ ತುಸು ಆತಂಕವಾದರೂ ತೋರಿಸಿಕೊಳ್ಳಲಿಲ್ಲ. 'ವಿರುಪಾಕ್ಷಿ ನನ್ನೆದುರು ಅಂಥ ಧೈರ್ಯ ತೋರಿಸಲಿಕ್ಕಿಲ್ಲ. ಆದ್ರೆ ಚೆನ್ನೇಶನದು ಭರವಸೆಯಿಲ್ಲ. ಅಂವ ಹರಾಂಖೋರ್ ಅದಾನ. ಅಕಲ್ ಕಮ್ಮಿ ಐತಿ ಅವಂಗೆ. ನಿಮಗೆ ಕಾಟ ಕೊಟ್ಟು ನನಮ್ಯಾಲ್ ಸೇಡ್ ತೀರಿಸ್ಕೋ ಬೇಕಾಗದ ಅಂವಂಗ. ನೀವೇನು ಗಾಬರಿ ಆಗ್ಬೇಡಿ. ನನ್ ಸ್ಟುಡೆಂಟ್ಸು ಅದಾರ. ಒಬ್ಬಂವ ಡಿವಾಯ್ಎಸ್ಪಿ ಅದಾನ. ಇನ್ನೊಬ್ಬ ಗದಗನಾಗ ಪಿಎಸೈ ಆಗ್ಯಾನ. ನಿನ್ನೆ ಅವ್ರ ಜೊತಿ ಫೋನಲ್ಲಿ ಕ್ಯಾಸುಅಲ್ ಆಗಿ ಮಾತಾಡಿದ್ದೆ. ನನ್ನ ಬಗ್ಗೆ ಬಾಳಾ ಅಭಿಮಾನ ಇಟ್ಕೊಂಡ ಹುಡುಗರು ಅವ್ರು. ಯಾವಾಗ ಏನಾರ ಮದತ್ ಬೇಕೂಂದ್ರ ಫೋನ್ ಮಾಡ್ರೀ ಟೀಚರ್, ಅಂದಾರ. ಮತ್ತ ಆ ಗಾಡಿ ನಮ್ಮ ಫಾಲೋ ಮಾಡ್ತು ಅಂದ್ರ ಏನಾರ ಮಾಡೂನು, ತಗೋ' ಅಂದಳು. ಪ್ರೀತಂನಿಗೂ ಸರಿ ಅನಿಸಿತು. ಚಹ ಕುಡಿದು ಕಾರ್ ಏರುವಾಗ ಶೈಲತ್ತೆ ಹಿಂದಿನ ಸೀಟಿಗೇ ಬಂದು 'ನೀ ನಡೂಕ ಕುಳ್ಕಪ್ಪ' ಎಂದು ಪ್ರೀತಂನನ್ನು ಮಧ್ಯ ಕುಳ್ಳಿಸಿಕೊಂಡಳು. 'ಈಗ ನೀ ಇಲ್ಲಿ ಸೇಫ್' ಅಂದಳು. ಪ್ರೀತಂ ತುಸು ನಾಚಿಕೊಂಡ. 'ಹೇ ಕಡಲ ತೀರದವ್ರು ಸಿನಿಮಾದಲ್ಲಿ ಹೀರೋ ಆಗಬಹುದು. ಆದರೆ ಬಾಡಿ ಗಾರ್ಡ್ಸ್, ನಾವೇ ಬಯಲು ಸೀಮೆಯವರು' ಅಂದಳು ಸುಮಿ.

'ಹೇ ಪ್ರೀತ್, ನೀನು ಫಿಲಮ್ ಸ್ಟಾರ್ ಆದ್ಮೇಲೆ ಟೀವಿಯವರಿಗೆಲ್ಲಾ ಇಂಟರ್ವ್ಯೂ, ಸಂದರ್ಶನ ಎಲ್ಲಾ ಕೊಡ್ಬೇಕಾಗುತ್ತಲ್ಲ. ಅದ್ಕೆ ನಿಂಗೆ ರಿಹರ್ಸಲ್ ಮಾಡಿಸ್ತೀನಿ, ಆಯ್ತಾ?' ಎಂದಳು.

'ಕಮಾನ್ ... ಐ ಆಮ್ ರೆಡಿ' ಎಂದ.

'ಓಕೆ... ಯು ಆರ್ ಟ್ರಾವೆಲ್ಲಿಂಗ್ ವಿತ್ ಟು ಬ್ಯೂಟಿಫುಲ್ ಲೇಡೀಸ್, ಇಬ್ಬರು ಪರಮ ಸುಂದರಿಯರ ಜೊತೆ ಪ್ರಯಾಣಿಸುತ್ತಿರುವುದು ತಮಗೆ ಹೇಗನಿಸುತ್ತೆ, ಸರ್?' ಎಂದು ಖಾಲಿ ವಾಟರ್ ಬಾಟಲ್ಲನ್ನೆ ಮೈಕ್ ಥರ ಹಿಡಿದಳು.

'ಫೀಲಿಂಗ್ ಗ್ರೇಟ್, ರಾಶಿ ಖುಶಿ ಆಗ್ತಿದೆ... ಆದ್ರೆ ಇಬ್ಬರಲ್ಲಿ ಒಬ್ಬಳ ಜೊತೆ ಆಯಸ್ಸು ಪೂರ್ತಿ ಜಿಂದಗಿ ನಡೆಸಬೇಕಲ್ಲಪ್ಪ' ಎಂದ ಪ್ರೀತಂ ಸ್ವಲ್ಪ ಸ್ಟೈಲಲ್ಲಿ.

'ಕಟ್ ಕಟ್ ಕಟ್. ಇಂಥ ಉತ್ತರ ಎಲ್ಲಾ ಎಡಿಟ್ ಮಾಡ್ಬಿಡ್ತೀನಿ... ನೆಟ್ಟಗೆ ರಿಪ್ಲೈ ಮಾಡು' ಎಂದು ಬಾಟಲಿಂದ ಅವನ ತಲೆಗೆ ಕುಕ್ಕಿದಳು.

'ಅರೆ, ಸ್ಟಾರ್ ಅಂತೀ, ಮತ್ತೆ ತಲೆಗೇ ಕುಟ್ತೀ... ಓಕೆ, ನೆಕ್ಸ್ಟ್ ಕ್ವಶ್ಚನ್'

'ಸರ್, ನಿಮ್ಮ ಲವ್ ಲೈಫ್ ಬಗ್ಗೆ ಹೇಳಿ... ನೀವು ನಿಮ್ಮ ಪ್ರೇಮಿಯನ್ನು ಹುಡುಕುತ್ತಾ ಕಡಲು ತೀರದಿಂದ ಘಟ್ಟ ಹತ್ತಿ, ಬಯಲು ಸೀಮೆ ವರೆಗೆ ಹೋಗಿದ್ರಿ ಅಂತೆಲ್ಲ ಕೇಳಿದ್ದೆ, ಅದು ನಿಜಾನಾ?'

'ಎಕ್ಚುವಲೀ ಮೀನು ತಿಂದುತಿಂದೂ ನಾಲಿಗೆ ಎಲ್ಲಾ ಜಡ್ಡುಗಟ್ಟಿ ಹೋಗಿತ್ತು. ಒಂದೆರಡು ದಿನಾ ಜೋಳದರೊಟ್ಟಿ ಖಾರಾಪುಡಿ ತಿಂದು ಬರೋಣ ಅಂತ ಹೋಗಿದ್ದು ಅಷ್ಟೆ'.

'ಈಡಿಯಟ್' ಎಂದು ಮತ್ತೆ ತಲೆಗೆ ಇಕ್ಕಿದಳು.

'ಓಕೆ, ಲೆಟ್ಸ್ ಮೂವ್ ಆನ್ ಟು ನೆಕ್ಸ್ಟ್ ಕ್ವಶ್ಚನ್... ನೀವು ಬಯಲುಸೀಮೆಯ ಹುಡುಗೀನ ಕಿಡ್ನ್ಯಾಪ್ ಮಾಡಿ ಮದುವೆ ಆಗಿದ್ದು ಅಂತೆ, ಹೌದಾ?'

'ಎಕ್ಚುವಲೀ, ಇಟ್ ಈಸ್ ಅದರ್ ವೇ ರೌಂಡ್... ಆ ಬಯಲು ಸೀಮೆಯ ಹುಡುಗೀನೇ ತನ್ನ ಅತ್ತೆ ಜೊತೆ ಸೇರಿ, ಬಲವಂತವಾಗಿ ಮದುವೆ ಎಂಬ ಖೆಡ್ಡಾದಲ್ಲಿ ಬೀಳಿಸಿದಳು. ನೀರಲ್ಲಿ ಬಿಟ್ಟ ಮೀನಿನಂತೆ ಹಾಯಾಗಿ ಲೈಫ್ ಮಾಡಬೇಕು ಅಂತಾ ಇದ್ದೆ ನಾನು'/

ಸುಮಿ ಈಗ ಕೈ ಮುಷ್ಟಿ ಮಾಡಿಯೇ ಪ್ರೀತಂನ ಮುಖಕ್ಕೆ ಗುದ್ದಿದಳು.

'ಶೈಲತ್ತೆ, ಇವ್ನು ಚಂದಾಗಿ ಒಮ್ಮೆ ಲವ್ಯೂ ಅಂದಿಲ್ಲ, ರೊಮ್ಯಾಂಟಿಕ್ ಆಗಿ ಮದುವೆಗೆ ಪ್ರೊಪೋಸ್ ಮಾಡ್ಲಿಲ್ಲ. ಇಂಥವನನ್ನು ಅವಸರದಲ್ಲಿ ನನ್ನ ತಲೆಗೆ ಕಟ್ಟೀಯಲ್ಲ' ಎಂದು ಅಳುಮೋರೆ ಮಾಡಿಕೊಂಡಳು.

ಹಿಂಬಾಲಿಸುತ್ತಿರುವ ಅಪರಿಚಿತ ವಾಹನದ ಬಗ್ಗೆ, ಇಬ್ಬರ ಭವಿಷ್ಯದ ಬಗ್ಗೆ ಆತಂಕದಲ್ಲೇ ಯೋಚಿಸುತ್ತಿದ್ದ ಶೈಲತ್ತೆಗೆ ಮಕ್ಕಳ ಇಂಥ ತುಂಟಾಟ ಮನಸ್ಸನ್ನು ಹಗುರಗೊಳಿಸಿತು. 'ಘಟ್ಟದ ಮೇಲಿನ ನೆಲ್ಲಿಕಾಯಿ, ಸಮುದ್ರದೊಳಗಿನ ಉಪ್ಪು, ಇದೊಳ್ಳೇ ಜೋಡಿ' ಎಂದು ಮನಸ್ಸಲ್ಲೇ ಅಂದುಕೊಂಡಳು. 'ಹೌದೇನೋ ಹುಡುಗಾ, ಇದು ಅಕ್ಷಮ್ಯ ಅಪರಾಧ. ನಮ್ ಚೆಲುವಿ ಸುಮಿ ನಿಂಗೆ ಬೇಕಂದ್ರೆ ಅವಳಿಗೆ ಒಮ್ಮೆ ಮುದ್ದಾಗಿ ಮನಸಿಂದ ಲವ್ಯೂ ಅಂದ್ಬಿಡು... ಹಾಗೇ ರೊಮ್ಯಾಂಟಿಕ್ ಆಗಿ ಪ್ರೊಪೋಸ್ ಕೂಡ ಮಾಡ್ಬಿಡು. ಬೇಕಾದ್ರೆ ಕೃಷ್ಣಾ ನದಿ ತಟದಲ್ಲಿ ಗಾಡಿ ನಿಲ್ಲಿಸಿ, ಈ ಎಲ್ಲ ಔಪಚಾರಿಕತೆಗಳನ್ನು ಮುಗಿಸಿಯೇ ಮುಂದೆ ಹೋಗೋಣ. ಮದುವೆ ಸಂಪ್ರದಾಯದಂತೆ ಮಾಡೋಕಾಗದೇ ಇರಬಹುದು, ಅದರ ಅಗತ್ಯವೂ ಇಲ್ಲ. ಆದರೆ ಪ್ರೇಮ ಮಾತ್ರ ಸಂಪ್ರದಾಯಬದ್ಧ ಆಗಲೇಬೇಕು' ಎಂದು ಶೈಲತ್ತೆಯೂ ನಾಟಕೀಯವಾಗಿಯೇ ಮಾತಾಡಿ ಮಕ್ಕಳನ್ನು ನಗಿಸಿದಳು.

ಅವರೆಲ್ಲರ ನಗು ಜೋರಾಗಿರುವಾಗಲೇ ನೇರ ರಸ್ತೆಯ ತುದಿಯಲ್ಲಿ ಬಿಳಿ ಬಣ್ಣದ ಸ್ಕಾರ್ಪಿಯೊ ನಿಂತಿರುವುದು ಕಣ್ಣಿಗೆ ಬಿತ್ತು. ಏನೇ ಆಗಲಿ ನಮ್ಮ ಕಾರ್ ನಿಲ್ಲಿಸಬಾರದು ಎಂದು ಶೈಲತ್ತೆ ಡ್ರೈವರನಿಗೆ ಸೂಚನೆ ನೀಡಿದಳು. ಅವಳ ಕೈಗಳು ಬ್ಯಾಗಲ್ಲಿ ತಡಕಾಡಿ ರಿವಾಲ್ವರ್ ಹೊರತೆಗೆದವು. ಪ್ರೀತಂನ ದೃಷ್ಟಿ ಈಗ ಆ ನಿಗೂಢ ವಾಹನದಿಂದ ಶೈಲತ್ತೆ ಹಿಡಿದ ರಿವಾಲ್ವರ್ ಮೇಲೆ ಕೇಂದ್ರೀಕೃತವಾಯಿತು. ಅವನು ಪ್ರಪ್ರಥಮ ಬಾರಿಗೆ ಅಂಥದ್ದನ್ನು ನೋಡುತ್ತಿದ್ದ. ಇದು ಗಂಭೀರ ಪರಿಸ್ಥಿತಿ ಎನಿಸಿ ಈಗ ಅವನ ಮೆದುಳು ಚುರುಕಾಯಿತು.

ಜನರಹಿತ ರಸ್ತೆಯಲ್ಲಿ ಏಕಾಂಗಿಯಾಗಿ ನಿಂತಿರುವ ಆ ವಾಹನವು ಭಯಸ್ವರೂಪಿಯಾಗಿತ್ತು ಎನ್ನುವುದು ಸುಳ್ಳಲ್ಲ. ಆದರೆ ವಾಹನದಿಂದ ಯಾರೂ ಕೆಳಗಿಳಿದಿರಲಿಲ್ಲ. ದಾಟಿ ಹೋಗುವಾಗಲೂ ಆ ವಾಹನದಿಂದ ಇಳಿದು ಯಾರೂ ತಡೆಯಲಿಲ್ಲ. ಸುತ್ತಲೂ ಕಪ್ಪು ಗ್ಲಾಸುಗಳನ್ನು ಪೂರ್ತಿ ಏರಿಸಿದ್ದರಿಂದ ಅದರೊಳಗಿರುವವರು ಯಾರೆಂದೂ ಕಾಣಲಿಲ್ಲ. ಗಾಡಿ ನಂಬರ್ ಮಾತ್ರ ಅದೇ ಆಗಿತ್ತು!

(ಸಶೇಷ)